**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ460/2023**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿನಾಯಕ |
| ತಂದೆಯ ಹೆಸರು | : | ನಾರಾಯಣ ನಾಯ್ಕ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಪೆಂಟಿಂಗ್ ಕೆಲಸ |
| ವಾಸ್ತವ್ಯ | : | ಮೂಡಭಟ್ಕಳ , ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ01/12/2023**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ದಿಃ11.05.2022 ರಂದು ನಾನು ಮೂಡಭಟ್ಕಳ ಸರ್ಕಲಿನಲ್ಲಿ ನನ್ನ ಅಂಗಡಿಯಲ್ಲಿ ನಿಂತಿದ್ದಾಗ ರಾತ್ರಿ 7.15 ರ ಸಮಯದಲ್ಲಿ ಜೊರಾಗಿ ಶಬ್ಧಕೇಳಿರುತ್ತದೆ. ಆಗ ನಾನು ಅಂಗಡಿಯಿಂದ ಹೊರಗೆ ಬಂದು ನೋಡಿದಾಗ ಒಂದು ಟ್ಯಾಂಕರ್ ಮತ್ತು ಸ್ಕೂಟಿ ವಾಹನಕ್ಕೆ ಅಪಘಾತ ಆಗಿತ್ತು. ಅಪಘಾತದಿಂದ ಸ್ಕೂಟಿ ವಾಹನದ ಚಾಲಕ ಮೃತಪಟ್ಟಿದ್ದರು. ಆಗ ಪೊಲೀಸರು ಸ್ಥಳಕ್ಕೆ ಬಂದಿದ್ದರು. ನಂತರ ನನ್ನನ್ನು ಅವರ ಜೀಪಿನಲ್ಲಿ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ಪೊಲೀಸರು ಒಂದು ಸಹಿ ಮಾಡಿ ಇನ್ಸೂರನ್ಸ ಕ್ಲೇಮ್ ಮಾಡಲು ಇದೆ ಎಂದು ಹೇಳಿದರು. ಹಾಗೆ ನಾನು ಸಹಿ ಮಾಡಿರುತ್ತೇನೆ. ನಾನು ಯಾವುದೇ ದೂರು ದಾಖಲಿಸಿರುವುದಿಲ್ಲ.

2. ನಂತರ ಮಾರನೇಯ ದಿನ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಹಾಗೆ ಅಪಘಾತವಾದ ಸ್ಥಳವನ್ನು ಪೊಲೀಸರು ನನಗೆ ತೋರಿಸಲು ಹೇಳಿರುತ್ತಾರೆ.ಹಾಗೆ ನಾನು ಸ್ಥಳ ತೋರಿಸಿರತ್ತೇನೆ. ಅಲ್ಲಿ ಪೊಲೀಸರು ನನ್ನನ್ನು ನಿಲ್ಲಿಸಿ ಪೊಟೋ ತೆಗೆದಿರುತ್ತಾರೆ. ಮಹಜರು ಮಾಡಿರುವುದಿಲ್ಲ. ಸಾಕ್ಷಿಯು 2 ಪೊಟೋ ಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಸಾಕ್ಷಾ ಅಧಿನಿಯಮ ಕಲಂ 65 ಬಿ ಯ ಅನ್ವಯಕ್ಕೆ ಒಳಪಟ್ಟು ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು. ಅಪಘಾತಕ್ಕೆ ಒಳಗಾದ ವಾಹನಗಳ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಅಪಘಾತಕ್ಕೆ ಒಳಗಾದ ಟ್ಯಾಂಕರ್ ಭಾರತ್ ಗ್ಯಾಸ್ ಗೆ ಸಂಬಂಧಿಸಿದ್ದಾಗಿತ್ತು.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 11.05.2022 ರಂದು ಸಂಜೆ 7.00 ಗಂಟೆ ಸಮಯದಲ್ಲಿ ಮೂಡಭಟ್ಕಳದ ಬೈಪಾಸ್ ನ ಬಳಿ ನಾನು ಮತ್ತು ನನ್ನ ಸ್ನೇಹಿತ ಚಾಸಾ-6 ರವರು ನಿಂತುಕೊಂಡಿದ್ದೇವು ಎಂದರೆ ಸರಿ. ಆ ದಿನ ನಾನು ಮತ್ತು ನನ್ನ ಸ್ನೇಹಿತ ಚಾಸಾ-7 ರವರ ಗೂಡಂಗಡಿಯಲ್ಲಿ ಮಾತನಾಡುತ್ತಾ ನಿಂತಿದ್ದೇವು ಎಂದರೆ ಸರಿ. ಆಗ ಈಗ ನ್ಯಾಯಾಲಯದ ಮುಂದಿರುವ ಆರೋಪಿ ಭಾರತ್ ಗ್ಯಾಸ್ ಟ್ಯಾಂಕರ್ ನಂಬರ್ ಕೆಎ-01, ಎಡಿ-7544 ಅನ್ನು ಮಂಗಳೂರು ಕಡೆಯಿಂದ ಹೊನ್ನಾವರದ ಕಡೆಗೆ ಅತಿವೇಗ ಮತು ಅಜಾರೂಕತೆಯಿಂದ ಚಲಾಯಿಸಿಕೊಂಡು ಬರುತ್ತಿದ್ದರೆಂದರೆ ನಾನು ನೋಡಿರುವುದಿಲ್ಲ. ಆಗ ಮೃತ ಮೊಹಮ್ಮದ್ ಇಕ್ಬಾಲ್ ತನ್ನ ಸ್ಕೂಟಿ ಸಂಖೆ- ಕೆಎ-20 ಇಎಮ್-0821 ರಲ್ಲಿ ಹೋಗುತ್ತಿದ್ದಾಗ ಅವರಿಗೆ ಆರೋಪಿಯು ಹಿಂದಿನಿಂದ ಡಿಕ್ಕಿ ಪಡಿಸಿದ್ದನೆಂದರೆ ನಾನು ನೋಡಿರುವುದಿಲ್ಲ. ಆಗ ಅಪಘಾತದ ರಭಸಕ್ಕೆ ಮೊಹಮ್ಮದ್ ಇಕ್ಬಾಲ್ ಇವರು ಗಂಭೀರ ಸ್ವರೂಪದ ಗಾಯಗೊಂಡು ಸ್ಥಳದಲ್ಲಿ ಮೃತಪಟ್ಟಿರುತ್ತಾರೆಂದರೆ ಸರಿ. ಆಗ ನಾನು ಮತ್ತು ಚಾಸಾ-6 ರವರು ಮೃತ ಬದುಕಿರಬಹುದೆಂದು ಆತನನ್ನು ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋದೆವು ಎಂದರೆ ಸರಿ. ಆಗ ಆಸ್ಪತ್ರೆಯಲ್ಲಿ ಸದ್ರಿಯವರು ಮರಣ ಹೊಂದಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ನಾನು ಅಪಘಾತದ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ದೂರು ದಾಖಲು ಮಾಡಿರುವುದಿಲ್ಲ ಆದರೆ ಘಟನೆ ಬಗ್ಗೆ ಹೇಳಿರುತ್ತೇನೆ, ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ . ಸಾಕ್ಷಿಗೆ ದೂರನ್ನು ತೋರಿಸಿದಾಗ ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಹಾಗಾಗಿ ದಾಖಲೆಯನ್ನು ಗುರುತಿಸುವ

ಸಲುವಾಗಿ ನಿಪಿ-3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು 3 ಎ ಎಂದು ಗುರುತಿಸಲಾಯಿತು.

2. ಪೊಲೀಸರು ದಿ:12.05.2020 ರಂದು ನನ್ನ, ಚಾಸಾ-2 ಮತ್ತು 3 ಹಾಗೂ ಚಾಸಾ-17 ರವರ ಸಮಕ್ಷಮದಲ್ಲಿ ಪೊಲೀಸರು ಮಹಜರು ಮಾಡಿರುತ್ತಾರೆಂದರೆ ಸರಿ. ಸಾಕ್ಷಿಗೆ ಸದ್ರಿ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ ಹಾಗಾಗಿ ಸದ್ರಿ ದಾಖಲೆಯನ್ನು ನಿಪಿ-4 ಅದರಲ್ಲಿರುವ ಸಾಕ್ಷಿಯ ಸಹಿಯನ್ನು 4 ಎ ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮದಲ್ಲಿ ನಕಾಶೆಯನ್ನು ತಯಾರಿಸಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಗೆ ನಕ್ಷೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ಮಾತ್ರ ನೋಡಿ ಗುರುತಿಸಿರುತ್ತಾರೆ ಹಾಗಾಗಿ ಸದ್ರಿ ದಾಖಲೆಯನ್ನು ಗುರುತಿಸುವ ಸಲುವಾಗಿ ನಿಪಿ-5 ಅದರಲ್ಲಿರುವ ಸಾಕ್ಷಿಯ ಸಹಿಯನ್ನು 5 ಎ ಎಂದು ಗುರುತಿಸಲಾಯಿತು.

3. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುತ್ತೇನೆಂದರೆ ಸರಿಯಲ್ಲ. ಆರೋಪಿಯು ನಿರ್ಲಕ್ಷತನ ಮತ್ತು ಅಜಾರೂಕತೆಯಿಂದ ಟ್ಯಾಂಕರನ್ನು ಚಲಾಯಿಸಿ ಡಿಕ್ಕಿ ಪಡಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ನಾನು ಅಪಘಾತ ನೋಡಿರುವುದಿಲ್ಲ. ನಾನೇ ಪೊಲೀಸ್ ಠಾಣೆಗೆ ಹೋಗಿ ಅಪಘಾತದ ಬಗ್ಗೆ ದೂರು ದಾಖಲಿಸಿರುತ್ತೇನೆಂದರೆ ಸಾಕ್ಷಿಯು ನಾನು ಘಟನೆಯ ಬಗ್ಗೆ ಹೇಳಿರುತ್ತೇನೆಂದು ನುಡಿದಿರುತ್ತಾರೆ. ಅಪಘಾತವನ್ನು ಕಣ್ಣಾರೆ ಕಂಡಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಅಪಘಾತ ನೋಡಿಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್ ಜಿ ಎನ್ ವಕೀಲರಿಂದ,**

ನನ್ನನ್ನು ಜೀಪಿನಲ್ಲಿ ಕರೆದುಕೊಂಡು ಹೋದ ಪೊಲೀಸರು ಯಾರು ಎಂದು ಗೊತ್ತಿಲ್ಲ. ಪೊಲೀಸ್ ಠಾಣೆಯಲ್ಲಿ ನಾನು ಆರೋಪಿಯ ಹೆಸರನ್ನು ಹೇಳಿರುವುದಿಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಒಂದು ಸಹಿ ಮಾಡಿರುತ್ತೇನೆ. ನಾನು ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನಂ ಎಂದರೆ ಸರಿಯಲ್ಲ. ನಾನು ಅಪಘಾತವಾಗಿ 2 -3 ನಿಮಿಷಗಳ ನಂತರ ಸ್ಥಳಕ್ಕೆ ಹೋಗಿರುತ್ತೇನೆ. ಮೃತಪಟ್ಟ ವ್ಯಕ್ತಿ ಅಪಘಾತ ಸ್ಥಳದಲ್ಲಿ ಟ್ಯಾಂಕರಿನ ಹಿಂದಿನ ಚಕ್ರದ ಹತ್ತಿರ ಬಿದ್ದಿದ್ದನು.

ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಹೇಳುವಂತೆ ಯಾವುದೇ ಪಂಚನಾಮೆಯನ್ನು ನನ್ನ ಸಮಕ್ಷಮ ಪೊಲೀಸರು ಮಾಡಿರುವುದಿಲ್ಲವೆಂದರೆ ಸರಿಯಲ್ಲ. ಅದನ್ನು ಪೊಲೀಸ್ ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-5 ನಕ್ಷೆಯನ್ನು ನನ್ನ ಸಮಕ್ಷಮ ಪೊಲೀಸರು ತಯಾರಿಸಿರುವುದಿಲ್ಲ. ಅದನ್ನು ತಯಾರಿಸಲು ನಾನು ಮಾಹಿತಿ ನೀಡಿರುವುದಿಲ್ಲ. ಪೊಲೀಸರು ಠಾಣೆಯಲ್ಲಿ ಯಾವ ದಾಖಲೆಗೆ ಸಹಿ ಪಡೆದರೆಂದು ನನಗೆ ಗೊತ್ತಿಲ್ಲ. ಆ ದಾಖಲೆಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನನ್ನ ಸ್ನೇಹಿತರಿಬ್ಬರು ಪೊಲೀಸ್ ಠಾಣೆಯಲ್ಲಿ ದಾಖಲೆಗೆ ಸಹಿ ಮಾಡಿರುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋದಾಗ ಚಾಸಾ-6 ಮತ್ತು 7 ರವರು ನನ್ನ ಜೊತೆಗೆ ಬಂದಿದ್ದರು. ಚಾಸಾ-2 ಮತ್ತು 3 ರವರು ಪಂಚನಾಮೆಗೆ ನನ್ನ ಸಮಕ್ಷಮ ಸಹಿ ಮಾಡಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಪೊಲೀಸರು ಯಾವುದೇ ಮಹಜರು ಮಾಡಿರುವುದಿಲ್ಲವೆಂದರೆ ಸರಿಯಲ್ಲ. ಪೊಲೀಸರ ಮುಲಾಜಿಗೆ ಒಳಗಾಗಿ ನಾನು ಪೊಲೀಸರು ಹೇಳಿದ ಕಡೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**